# ಗಾಂಧಿ ಬಂದ: ಸಾಮಾನ್ಯರ ಬದುಕಿನಲ್ಲೊಂದು ಮನ್ವಂತರ

**ಶಿಲ್ಪಶ್ರೀ ಹೆಚ್.ವಿ.***

**DOI: https://doi.org/10.5281/zenodo.21189377**

**ABSTRACT**

ಡಾ. ಎಚ್. ನಾಗವೇಣಿ ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ 'ಗಾಂಧಿ ಬಂದ' ಕಾದಂಬರಿಯು ಸ್ವಾತಂತ್ರ್ಯ ಚಳವಳಿಯ ಕಾಲಘಟ್ಟದಲ್ಲಿ ತುಳುನಾಡಿನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಪಲ್ಲಟಗಳನ್ನು ಅತ್ಯಂತ ನೈಜವಾಗಿ ಚಿತ್ರಿಸಿದೆ. ಮಂಗಳೂರಿಗೆ ಗಾಂಧೀಜಿಯವರು ನೀಡಿದ ಮೂರು ಭೇಟಿಗಳ ಹಿನ್ನೆಲೆಯಲ್ಲಿ ಈ ಕೃತಿ ರೂಪುಗೊಂಡಿದೆ. ಕರಾವಳಿಯ ಜನಜೀವನ, ಕಂಬಳ ಮತ್ತು ಭೂತಕೋಲದಂತಹ ಸಾಂಪ್ರದಾಯಿಕ ಆಚರಣೆಗಳ ನಡುವೆ ಗಾಂಧಿವಾದವು ಸಾಮಾನ್ಯ ಜನರ ಬದುಕಿನಲ್ಲಿ ಹೇಗೆ ಕ್ರಾಂತಿಕಾರಿ ಸಂಚಲನ ಮೂಡಿಸಿತು ಎಂಬುದನ್ನು ಇದು ಸೂಕ್ಷ್ಮವಾಗಿ ವಿವರಿಸುತ್ತದೆ. ಸನಾತನ ಕಂದಾಚಾರಗಳ ನಡುವೆಯೂ ಅಸಹಕಾರ ಚಳವಳಿ, ವಿಧವಾ ವಿವಾಹ, ಹಾಗೂ ಅಸ್ಪೃಶ್ಯತಾ ನಿವಾರಣೆಯಂತಹ ಸುಧಾರಣೆಗಳು ಹೇಗೆ ಬೇರೂರಿದವು ಎನ್ನುವುದನ್ನು ದ್ರೌಪದಿ, ಅದ್ರಾಮ, ಮಾರಪ್ಪ ಮತ್ತು ಐತುವಿನಂತಹ ಪಾತ್ರಗಳ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಡಲಾಗಿದೆ.

**KEYWORDS:** ಗಾಂಧಿ ಬಂದ, ತುಳುನಾಡಿನ ಸಂಸ್ಕೃತಿ, ಗಾಂಧಿವಾದ, ಸಾಮಾಜಿಕ ಸುಧಾರಣೆ, ಸ್ವಾತಂತ್ರ್ಯ ಚಳವಳಿ.

* **ಡಾ. ಶಿಲ್ಪಶ್ರೀ ಹೆಚ್.ವಿ.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಸಾಗರ, ಶ್ರೀರಂಗಪಟ್ಟಣ, ಮಂಡ್ಯ.

ಡಾ. ಎಚ್. ನಾಗವೇಣಿ ಅವರು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕಿನ ಹೊನ್ನಕಟ್ಟೆಯವರು. ಇವರು ಕರಾವಳಿಯ ಸಾಂಸ್ಕೃತಿಕ ವೈವಿಧ್ಯವನ್ನು ತಿಳಿಸುತ್ತಲೇ ಅಲ್ಲಿನ ಸಾಮಾಜಿಕ ಬದಲಾವಣೆಗಳನ್ನು ಕೇಂದ್ರವಾಗಿರಿಸಿಕೊಂಡು ತಮ್ಮ ಸಾಹಿತ್ಯವನ್ನು ರಚಿಸಿದ್ದಾರೆ. 'ಬರವಣಿಗೆ ಎನ್ನುವುದು ಬೇನೆಯೂ ಅಲ್ಲ, ಬಸವಳಿಯುವ ಕೆಲಸವೂ ಅಲ್ಲ!' ಎನ್ನುವ ಇವರು 'ಗಾಂಧಿ ಬಂದ' ಕಾದಂಬರಿಯ ಮೂಲಕ ಕನ್ನಡದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರೆನಿಸಿದ್ದಾರೆ. ಇವರ ಈ ಕೃತಿಗೆ ಚದುರಂಗ ಪ್ರಶಸ್ತಿ, ಗೀತಾದೇಸಾಯಿ ಪ್ರಶಸ್ತಿ, ಎಸ್. ಎಸ್. ಭೂಸನೂರುಮಠ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿರುವುದು ಇದರ ಮಹತ್ವವನ್ನು ತಿಳಿಸುತ್ತವೆ.

'ಗಾಂಧಿ ಬಂದ' ಕಾದಂಬರಿಯು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿಗೆ ಗಾಂಧಿಯವರು ಮೂರು ಬಾರಿ ಭೇಟಿ ಕೊಡುವ ಹಿನ್ನೆಲೆಯಲ್ಲಿ ತುಳುನಾಡಿನ ಗ್ರಾಮದ ಕತೆಯನ್ನು ಕಟ್ಟಿಕೊಡುತ್ತದೆ. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಸ್ವರಾಜ್ಯ ಸಾಧನೆಗಾಗಿ ಗಾಂಧಿಯವರು ದೇಶಾದ್ಯಂತ ಸಂಚರಿಸುತ್ತಿದ್ದರು. ಗಾಂಧಿಯವರ ಇಂತಹ ಮಹತ್ ಕಾರ್ಯಕ್ಕೆ ಗ್ರಾಮೀಣ ಜನರು ಸ್ಪಂದಿಸಿದ ಬಗೆಯನ್ನು ತಿಳಿಸುತ್ತದೆ. ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ತಮ್ಮ ಬದುಕು ಮತ್ತು ಸಮಾಜದೊಳಗೆ ಅವರ ಆಶಯದಂತೆಯೇ ಬದುಕಲು ಪ್ರಯತ್ನಿಸುವವರ ಕತೆ ಇದಾಗಿದೆ. ಇದು ತುಳುನಾಡಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಸ್ಥಿತಿ-ಗತಿಯನ್ನು ವಿವರಿಸುತ್ತದೆ ಮತ್ತು ಗಾಂಧಿಯವರ ಪ್ರಭಾವದಿಂದ ಆ ಸಮಾಜದಲ್ಲಾದ ಬದಲಾವಣೆಗಳನ್ನು ದಾಖಲಿಸಿದೆ.

ಸುರಗಿಮಠದ ಪಟೇಲ ಶೀನಪ್ಪಯ್ಯ ಹೆಬ್ಬಾರರ ದೈವದ ಹರಕೆಯಾದ ಕಂಬಳದ ಮೂಲಕ ಈ ಕಾದಂಬರಿ ಆರಂಭವಾಗುತ್ತದೆ. ಹೆಬ್ಬಾರರದು ಬ್ರಾಹ್ಮಣ ಕುಟುಂಬ. ಇವರ ತಾಯಿ ಅಮ್ಮಣಿಯಮ್ಮ ತುಂಬಾ ಮಡಿಹೆಂಗಸು. ಹೆಂಡತಿ ರುಕ್ಮಿಣಿಯಮ್ಮ, ಇವರ ಮಗಳು ದ್ರೌಪದಿ, ಮಗ ಹಯವದನ. ಸಂಪ್ರದಾಯವಾದಿ, ಧರ್ಮಶಾಸ್ತ್ರವನ್ನು ಹೆಚ್ಚಾಗಿಯೇ ನಂಬುವವ, ಕುತಂತ್ರ ಹಾಗೂ ಜಿಪುಣತನದ ವ್ಯಕ್ತಿತ್ವವುಳ್ಳವರು ಈ ಹೆಬ್ಬಾರರು. ತಮ್ಮ ಆಳುಮಕ್ಕಳಾದ ಅಂತಪ್ಪ, ಕೂಸಮ್ಮೈಲಿ, ಅವನ ಹೆಂಡತಿ ಸೇಸಿ, ಐತ ಮೊದಲಾದವರ ಮೇಲೆ ಅಧಿಕಾರ ಚಲಾಯಿಸುತ್ತ ಕಂಬಳ, ಭೂತ ಕೋಲಗಳನ್ನು ಮಾಡುತ್ತ ಹಬ್ಬ-ಹರಿದಿನಗಳನ್ನು ಆಚರಿಸುತ್ತ ತಮ್ಮ ಸ್ವಾರ್ಥಕ್ಕಾಗಿ ಎಲ್ಲವನ್ನು ಬಳಸಿಕೊಳ್ಳುವ, ಅನ್ಯಜಾತಿ, ಅನ್ಯಧರ್ಮೀಯರನ್ನು ಸಹಿಸದ ಹೆಬ್ಬಾರರು ದೊಡ್ಡ ಮನೆತನವರಾದರು, ಮೇಲ್ಜಾತಿಯವರಾದರು ಸಣ್ಣತನ ತುಂಬಿದ್ದ ವ್ಯಕ್ತಿತ್ವದವರಾಗಿದ್ದರು.

ಸುರಗಿಮಠಕ್ಕೆ ಹೊಂದಿಕೊಂಡಂತೆಯೇ ಕುಳ್ಯಾಗುತ್ತಿನ ಪಾಂಡುಶೆಟ್ಟರ ಕುಟುಂಬ, ಮುದ್ದಣ್ಣಶೆಟ್ಟಿ ಹಾಗೂ ಸೂರಕ್ಕೆಯರ ಕುಟುಂಬ, ಜಾರಿಗೆಬೆಟ್ಟಿನ ಸುಬ್ಬಯ್ಯ ಶೆಟ್ಟರ ಶೂದ್ರ ಕುಟುಂಬಗಳು ಅಲ್ಲಿ ವಾಸವಾಗಿದ್ದವು.

ಇವರಲ್ಲಿ ಕುಳ್ಯಾಗುತ್ತಿನ ಶೆಟ್ಟರು, ಮಾರಪ್ಪ ಶೆಟ್ಟರು, ಬೆಸ್ತರ ಗುರಿಕಾರ ಪೂವ

ಮರಕಾಲ, ಮೋನಪ್ಪ ತಿಂಗಳಾಯರು, ಜಟಕಾ ಗಾಡಿಯ ಅದ್ರಾಮ ಮೊದಲಾದವರೆಲ್ಲ ಗಾಂಧಿಯವರ ಅನುಯಾಯಿಗಳಾಗಿದ್ದರು. ಇವರೆಲ್ಲ ಸುಧಾರಣಾವಾದಿಯು, ಗಾಂಧಿವಾದಿಯು, ದೇಶಭಕ್ತರು ಆಗಿದ್ದ ಕಾರ್ನಾಡು ಸದಾಶಿವರಾಯರ ಮುಂದಾಳತ್ವದಲ್ಲಿ ಗಾಂಧಿಯವರ ಅಸಹಕಾರ ಚಳುವಳಿ, ವಿದೇಶಿ ವಸ್ತ್ರ ಬಹಿಷ್ಕಾರ, ಖಾದಿ ಪ್ರಚಾರ, ವಿಧವಾ ವಿವಾಹ ಮೊದಲಾದವೆಲ್ಲವನ್ನು ಆ ತುಳುನಾಡಿನ ಸುತ್ತಲು ಪ್ರಚಾರಕ್ಕೆ ತಂದಿದ್ದರು. ಇದಕ್ಕಾಗಿ ನಿರಂತರವಾಗಿ ದುಡಿಯುತ್ತಿದ್ದರು.

ಒಮ್ಮೆ ಜಾತಿ ಭೇದದ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಜಾತ್ರೆಯಲ್ಲಿ ಪಂಕ್ತಿಭೇದ ಮಾಡದೆ ಎಲ್ಲರಿಗೂ ಸಹಪಂಕ್ತಿ ಭೋಜನ ಮಾಡಿಸಬೇಕೆಂದು ಪ್ರಯತ್ನಿಸಿ ಬ್ರಾಹ್ಮಣರ ಬುದ್ಧಿವಂತಿಕೆ ಹಾಗೂ ಶೂದ್ರರ ಒಳಜಗಳಗಳಿಂದ ವಿಫಲರಾಗಿದ್ದರು.

ಗಾಂಧಿಯವರು ಆಟಿಸೋಣ ತಿಂಗಳಲ್ಲಿ ಮೊದಲನೇ ಬಾರಿಗೆ ಮಂಗಳೂರಿಗೆ ಭೇಟಿನೀಡಿದಾಗ ಇವರೆಲ್ಲ ಅವರನ್ನು ಕಂಡು ಸ್ವರಾಜ್ಯ ಸಾಧನೆಗಾಗಿ ಬೇಕಿದ್ದ ನಗ-ನಾಣ್ಯವನ್ನು ತಮ್ಮಿಂದಾಗುವಷ್ಟು ನೀಡಿದ್ದರು. ಕುಳ್ಯಾಗುತ್ತಿನ ಶೆಟ್ಟರ ಸಹೋದರನಾದ ಮಾರಪ್ಪಶೆಟ್ಟಿಯು ಗಾಂಧಿಯ ಅನುಯಾಯಿ. ದೇಶಪ್ರೇಮಿಯಾಗಿದ್ದ ಈತ ತನ್ನ ಬದುಕು ದೇಶಸೇವೆಗಾಗಿಯೇ ಎಂದು ತೀರ್ಮಾನಿಸಿದ್ದ. ಮೂವತ್ತು ದಾಟಿದರೂ ಮದುವೆಯಾಗದ ಮಗ ಮಾರಪ್ಪ ಈ ಗಾಂಧಿಯ ಸಹವಾಸದಿಂದಲೇ ಕೆಡುತ್ತಿರುವನೆಂದು ಸೂರಕ್ಕೆಗೆ ಸಿಟ್ಟಿತ್ತು.

ಗಾಂಧಿಯವರು ಏಳು ವರ್ಷಗಳ ಅನಂತರ ಪ್ರಭವ ಸಂವತ್ಸರದಲ್ಲಿ ಮಂಗಳೂರಿಗೆ ಎರಡನೇ ಭೇಟಿ ನೀಡುವ ಹೊತ್ತಿಗೆ ಇವರೆಲ್ಲರ ಬದುಕಿನಲ್ಲಿ ಬದಲಾವಣೆಗಳಾಗಿದ್ದವು. ಗಾಂಧಿ ಬರುವ ಹಿಂದಿನ ದಿನ ಸುಬ್ಬಯ್ಯ ಶೆಟ್ಟರ ಹೆಂಡತಿ ಸಾಸಿಯಕ್ಕ ತನ್ನ ಮಗಳು ದಾರು 'ಶಿಖಂಡಿ' ಎಂದು ತಿಳಿದು, ಅವಳ ಭವಿಷ್ಯದ ಬಗ್ಗೆ ಚಿಂತಿಸಿ ದುಃಖ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಳು. ನೋಡಲು ಚೆಲುವಾಗಿಯೇ ಇದ್ದ ದಾರುವಿಗೆ ಗರ್ಭಚೀಲವೇ ಇಲ್ಲದಿದ್ದುದು ಅವಳಿಗೆ ಶಿಖಂಡಿ ಪಟ್ಟವನ್ನು ತಂದಿತ್ತು. ಮದುವೆಯನ್ನೇ ಆಗಬಾರದೆಂದಿದ್ದ ಮಾರಪ್ಪ ದಾರುವಿನ ದುಃಖದ ಸ್ಥಿತಿ ಕಂಡು ಎಲ್ಲರನ್ನು ಒಪ್ಪಿಸಿ ಆಕೆಯನ್ನು ಮದುವೆಯಾದ. ಈ ಮೂಲಕ ಅಸಹಾಯಕ ಹೆಣ್ಣುಮಗಳಿಗೆ ಸಹಾಯಮಾಡಿದ್ದನೆಂಬ ಸಮಾಧಾನದಲ್ಲಿದ್ದನೇ ಹೊರತು ಅವಳೊಡನೆ ಸಂಸಾರ ಮಾಡಿರಲಿಲ್ಲ.

ಹೆಬ್ಬಾರರ ಮಗಳಾದ ದ್ರೌಪದಿಯನ್ನು ತಣ್ಣೀರುಬಾವಿಯ ಕೇಶವಶಾನುಭೋಗ ಹಾಗೂ ತುಳುಸಮ್ಮರ ಮಗನಾದ ನರಹರಿಗೆ ಮದುವೆ ಮಾಡಿದ್ದರು. ಮಂಗಳೂರಿನ ಇಗರ್ಜಿ ಶಾಲೆಯಲ್ಲಿ ಮೇಷ್ಟ್ರಾಗಿದ್ದ ನರಹರಿ ಬೇಸಿಗೆ ರಜೆಯಲ್ಲಿ ದ್ರೌಪದಿಯೊಡನೆ ಸುರಗಿಮಠಕ್ಕೆ ಬಂದವರು ಸಮುದ್ರದ ತೆರೆಗೆ ಬಲಿಯಾದರು. ಮದುವೆಯಾದ ಒಂದೇ ವರ್ಷಕ್ಕೆ ವಿಧವೆಯಾದ ದ್ರೌಪದಿ ತನ್ನ ಬಯಕೆ - ಬೇಗುದಿಗಳನ್ನೆಲ್ಲ ಅದುಮಿಟ್ಟು ಸನಾತನ ಆಚರಣೆಗಳ ತನ್ನ ತವರಿನಲ್ಲಿ ಬಂಧಿಯಾಗಬೇಕಾಯಿತು.

ರುಕ್ಮಿಣಿಯಮ್ಮನ ತವರಾದ ತಡಂಬೈಲಿನ ಮೀನಿನ ಬ್ಯಾರಿ ಮೊಯ್ದಿನಬ್ಬನ ಹಿರಿಮಗನಾದ ಅದ್ರಾಮ ಮಂಗಳೂರಿನಿಂದ ಉಡುಪಿಯವರೆಗೆ ಜಟಕಾ ಓಡಿಸುವ ಕಾಯಕ ಮಾಡುತ್ತಿದ್ದ. ರುಕ್ಮಿಣಿಯಮ್ಮನನ್ನು ಮಕ್ಕಳ ಸಮೇತ ತವರಿಗೆ ಹಾಗೂ ಗಂಡನ ಮನೆಗೆ ಓಡಾಡಿಸುತ್ತಿದ್ದ ಅದ್ರಾಮ ದ್ರೌಪದಿಯನ್ನು ಬಾಲ್ಯದಿಂದಲೇ ಕಂಡಿದ್ದ. ಅವಳ ಮದುವೆಯಲ್ಲಿ ತಾನು ಸಂಭ್ರಮದಿಂದ ಓಡಾಡಿದ್ದ. ಆದರೆ, ವಿಧವೆಯಾಗಿ, ಬೋಳು ಮಂಡೆಯಲ್ಲಿದ್ದ ದ್ರೌಪದಿಯ ಸ್ಥಿತಿಯನ್ನು ಕಂಡು ಮರುಗಿದ. ಗಾಂಧಿಯವರ ಅನುಯಾಯಿ, ಅಭಿಮಾನಿಯು ಆದ ಅದ್ರಾಮ ಹೆಬ್ಬಾರರಿಗೆ ದ್ರೌಪದಿಗೆ ಮರು ಮದುವೆ ಮಾಡಿಸಬೇಕೆಂದು ಸಲಹೆ ನೀಡಿ ಅವರಿಂದ ಬೈಯಿಸಿಕೊಂಡಿದ್ದ. ದ್ರೌಪದಿಗೆ ಧರ್ಮಶಾಸ್ತ್ರದ ಕಟ್ಟುಪಾಡುಗಳು ಮನುಷ್ಯ ನಿರ್ಮಿತವೆಂದು ಹೇಳಿ ಸುಧಾರಣಾವಾದವನ್ನು ಅವಳ ಮನಸ್ಸಿನಲ್ಲಿ ಬಿತ್ತಿದ್ದ. ಅದ್ರಾಮನ ಅಕ್ಕರೆ, ಕಾಳಜಿ, ಪ್ರೀತಿಗೆ ಸೋತ ದ್ರೌಪದಿ ಅವನ ಮಾತುಗಳಿಂದ ಹೊಸ ಹುಮ್ಮಸ್ಸನ್ನು ಪಡೆದಳು. ಅದ್ರಾಮನಿಗೂ ದ್ರೌಪದಿಯಲ್ಲಿ ಒಲವು ಮೂಡಿತು. ಇದನ್ನು ಅರಿತ ಹೆಬ್ಬಾರರ ಕುಟುಂಬ ದ್ರೌಪದಿಯ ಕಾವಲು ಕಾದರು. ಆದರೂ ಅದ್ರಾಮ ಕಂಗಿನ ಕುಣಿತ ವೇಷಧಾರಿಯಾಗಿ ದ್ರೌಪದಿಯನ್ನು ಒಮ್ಮೆ ನೋಡಿ ಬಂದಿದ್ದ. ಮತ್ತೊಮ್ಮೆ ಭೂತಕೋಲದ ದಿನ ದ್ರೌಪದಿಗೆ ಹೂ ನೀಡಿದ್ದ.

ಗಾಂಧಿಯವರು ಎರಡನೆ ಬಾರಿ ಮಂಗಳೂರಿಗೆ ಭೇಟಿ ನೀಡಿ ಹೋದ ಮೇಲೆ ಹೆಬ್ಬಾರರಿಗೊಬ್ಬರಿಗೆ ಬಿಟ್ಟು ಉಳಿದವರಿಗೆಲ್ಲ ಬೇಕಾದ ಅದ್ರಾಮ ತಾನು ದ್ರೌಪದಿಯನ್ನು ಮದುವೆಯಾಗಬೇಕೆಂದಿರುವುದನ್ನು ಗಾಂಧಿವಾದಿಗಳಾದ ಗುತ್ತಿನ ಕೇಶವ ಪಾಂಡುಶೆಟ್ಟರಿಗೆ, ತಿಂಗಳಾಯರಿಗೆ ತಿಳಿಸಿದ. ತಣ್ಣೀರುಬಾವಿಯ ಮಾವ ಶಾನುಭೋಗರ ಮನೆಗೆ ಹೋಗಿದ್ದ ದ್ರೌಪದಿಯನ್ನು ತಾನೇ ಕರೆದೊಯ್ದು ಬಿಡುತ್ತೇನೆಂದು ಹೇಳಿ ಯಾರಿಗೂ ತಿಳಿಯದಂತೆ ಗುತ್ತಿನೊಡೆಯರ ಅಂಗಳದಲ್ಲಿ ದ್ರೌಪದಿಯನ್ನು ಮದುವೆಯಾದ. ಈ ಮೂಲಕ ಹೆಬ್ಬಾರರ ಹಾಗೂ ಆ ಸುತ್ತಲಿನ ಬ್ರಾಹ್ಮಣರ ಕೋಟೆಗೆ ಪೆಟ್ಟುಕೊಟ್ಟಿದ್ದ ಅದ್ರಾಮ. ಗಾಂಧಿಯವರ ಆಶಯದಂತೆ ವಿಧವಾ ವಿವಾಹವಾಗಿ ಸುಧಾರಣಾವಾದಿಯಾದ.

ಗಾಂಧಿಯವರು ಮೂರನೇ ಬಾರಿ ಮಂಗಳೂರಿಗೆ ಬರುವ ವೇಳೆಗೆ ಮಂಗಳೂರಿನಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಿತ್ತು. ಇದರಲ್ಲಿ ಕಾರ್ನಾಡು ಸದಾಶಿವರಾಯರನ್ನು ಬಂಧಿಸಿ ವೆಲ್ಲೂರಿನ ಕಾರಾಗೃಹದಲ್ಲಿರಿಸಲಾಗಿತ್ತು. ಮಾರಪ್ಪ ಮತ್ತು ತಿಂಗಳಾಯರು ಬಂಧನಗೊಂಡು ಬಿಡುಗಡೆಯಾಗಿದ್ದರು. ಮತ್ತೆ ಅಲ್ಲಿಯೇ ಮದ್ಯಪಾನ ನಿಷೇಧ ಚಳವಳಿಯು ನಡೆಯಿತು. ಇವೆಲ್ಲದರಲ್ಲಿ ಗುತ್ತಿನ ಶೆಟ್ಟರು, ಮಾರಪ್ಪ, ಅದ್ರಾಮ, ತಿಂಗಳಾಯರೆಲ್ಲರು ಸಕ್ರಿಯರಾಗಿದ್ದರು. ಈ ವೇಳೆಗೆ ಇದುವರೆಗೂ ದಾರುವಿನ ಹೆಂಗರಳಿಗೆ ಮರುಗದೆ ಸ್ಪಂದಿಸದೆ ಇದ್ದ ಮಾರಪ್ಪ ಕಾರಾಗೃಹದ ಬಂಧನದಿಂದ ಬಿಡುಗಡೆ ಹೊಂದಿದ ಬಳಿಕ ಅವಳ ಒಡನಾಟದಿಂದ ತನ್ನ ತಪ್ಪನ್ನು ತಿದ್ದುಕೊಂಡನು. ಅವಳಿಗೆ ಪ್ರೀತಿಯ ಧಾರೆ ಎರೆದನು.

ಅದ್ರಾಮನು ಗುತ್ತಿನೊಡೆಯರ ಬೆಂಬಲದಿಂದ ದ್ರೌಪದಿಯೊಡನೆ ಸುಖವಾಗಿ ಸಂಸಾರಮಾಡಿಕೊಂಡಿದ್ದನು. ಅವಳ ಯಾವುದೇ ಆಸೆಯನ್ನು ತಿರಸ್ಕರಿಸದೆ ಅವಳಿಗೆ ಜೀವಸಖನಾಗಿದ್ದನು. ಇವನ ಅಕ್ಕರೆಯಲ್ಲಿ ಮಿಂದಿದ್ದ ದ್ರೌಪದಿ ಗಂಡುಮಗುವಿಗೆ ಜನ್ಮ ನೀಡಿದ್ದಳು. ಆದರೆ, ಮಂಗಳೂರಿನಲ್ಲಿ ಪರದೇಶಿ ವಸ್ತ್ರ ದಹನದ ಚಳವಳಿಯಲ್ಲಿ ಭಾಗವಹಿಸಿದ್ದಾಗ ಪೊಲೀಸರ ದಿಢೀರ್ ದಾಳಿಗೆ ತುತ್ತಾಗಿ ಅದ್ರಾಮ ಕೊನೆಯುಸಿರೆಳೆದನು.

ಈ ಸಾವಿಗೆ ಹೆಬ್ಬಾರರು ಹಾಗೂ ಉಳಿದ ಬ್ರಾಹ್ಮಣರನ್ನು ಬಿಟ್ಟು ಮಿಕ್ಕ ಎಲ್ಲರೂ ದುಃಖಿಸಿದರು. ಬಾಣಂತಿಯಾಗಿದ್ದ ದ್ರೌಪದಿ ತನ್ನ ಬದುಕನ್ನೇ ಕಳೆದುಕೊಂಡಳು. ಆದರೆ ಮಾರಪ್ಪ, ದಾರು, ಸೂರಕ್ಕ, ಕುಳ್ಯಾಗುತ್ತಿನ ಒಡೆಯರು ಮೊದಲಾದವರ ಬೆಂಬಲದಿಂದ ಅವಳು ಅದ್ರಾಮನ ನೆನಪಲ್ಲಿಯೇ ಮತ್ತೆ ಬದುಕಲು ಆರಂಭಿಸಿದಳು.

ಮಲೆಯಾಳಕ್ಕೆ ಹೋಗಿದ್ದ ನಾರಾಯಣಭಟ್ಟರು ಹತ್ತು ವರ್ಷಗಳ ಅನಂತರ ಬಂದದ್ದು ಪುಟ್ಟಮ್ಮಕ್ಕರಿಗೆ ಹಿಡಿಸದಿದ್ದುದು ಇಲ್ಲಿ ಸಕಾರಣವಾಗಿಯೇ ಇದೆ. ಕುಷ್ಠರೋಗಿಯಾಗಿರುವ ಈತನನ್ನು ನೋಡಿಕೊಳ್ಳಬೇಕೆ, ಗಾಂಧಿಯನ್ನು ನೋಡಲು ಹೋಗಬೇಕೆ ಎಂಬ ಗೊಂದಲಗಳಲ್ಲಿ ಸಿಲುಕಿದ ಪುಟ್ಟಮ್ಮಕ್ಕನಿಗೆ ಕೊನೆಗೆ ಗಂಡನೇ ಮುಖ್ಯವಾಗುತ್ತಾನೆ. ಈ ನಿರ್ಧಾರದ ಹಿಂದೆ ಗಂಡನ ಬಗ್ಗೆ ಕರುಣೆ ಇದೆಯೇ ಹೊರತು ಪ್ರೀತಿಯಲ್ಲ. ಹಾಗೆ ನೋಡಿದಲ್ಲಿ ಈಗಾಗಲೆ ದೈಹಿಕವಾಗಿ ಬಳಲಿರುವ ನಾರಾಯಣ ಭಟ್ಟರು ಮಾನಸಿಕವಾಗಿಯು ಬಳಲಬಾರದೆಂಬುದು ಪುಟ್ಟಮ್ಮಕ್ಕನ ನಿಲುವಾಗಿದೆ. ಇದು ಗಾಂಧಿಯವರು ಹೇಳುವ 'ಅಹಿಂಸೆ'ಯ ಆಚರಣೆಯೆ ಆಗಿದೆ. ಭಟ್ಟರು ಬೇಡವೆಂದರೂ ಗಾಂಧಿಯವರನ್ನು ನೋಡಲು ಬಂದು ಅವರಿಗೆ ಹಿಂಸೆ ನೀಡಬೇಕೆಂಬ ಯೋಚನೆ ಪುಟ್ಟಮ್ಮಕ್ಕನಿಗೆ ಬರದಿರುವುದು ಅವರೊಳಗೆ ಗಾಂಧಿಯಿರುವುದನ್ನು ಕಾಣಿಸುತ್ತದೆ. ಈ ಮೂಲಕ ಗಾಂಧಿಯನ್ನು ನೋಡಲಾಗದ ಅಸಹಾಯಕತೆಯನ್ನು ಅವರಲ್ಲಿ ಕಂಡರೂ ಮಾನವೀಯತೆಯ ನೆಲೆಯಿಂದ ಪುಟ್ಟಮ್ಮಕ್ಕನ ವ್ಯಕ್ತಿತ್ವ ಮಹತ್ವದ್ದೇ ಆಗುತ್ತದೆ.

ಪುಟ್ಟಮ್ಮಕ್ಕನಂತೆಯೇ ಗಾಂಧಿಯವರನ್ನು ಕಾಣಲು ಕಾತರರಾಗಿದ್ದವನು ಕೊರಗರ ಐತು. ಈ ಹಿಂದೆ ಗುತ್ತಿನಶೆಟ್ಟರು, ಮಾರಪ್ಪ ಮೊದಲಾದವರೆಲ್ಲ ಸೇರಿ ಜಾತ್ರೆಯಲ್ಲಿ ಪಂಕ್ತಿಭೇದ ಮಾಡಬಾರದೆಂದು ಏರ್ಪಡಿಸಿದ್ದ ಸಹಪಂಕ್ತಿ ಭೋಜನದಲ್ಲಿ ಶೂದ್ರರ ಮೇಲ್ಜಾತಿಯವರೊಡನೆ ಊಟ ಮಾಡಿದ್ದ ಐತು. ಇದು ಗಾಂಧಿಯವರಿಂದ ಆದದ್ದೆಂದು ತಿಳಿದು ಅಂದಿನಿಂದ ಗಾಂಧಿಭಕ್ತನಾಗಿದ್ದ.

ಅವರನ್ನು ಕಾಣಬೇಕೆಂಬ ಹಂಬಲಿಸಿದ್ದ ಐತುವಿಗೆ ತಿಂಗಳಾಯರು ಗಾಂಧಿಯವರ ಅಹಿಂಸೆಯ ಬಗ್ಗೆ ಬೋಧಿಸಿದೊಡನೆ ಮತ್ತೆಂದು ಆಮೆಯ ಸಹವಾಸಕ್ಕೆ ಹೋಗದಿರುವುದಾಗಿ ತೀರ್ಮಾನಿಸುವುದು ಅವನ ಮುಗ್ಧತೆ ಹಾಗೂ ಗಾಂಧಿಯವರ ಬಗೆಗಿನ ಅವನ ಭಕ್ತಿ ಅರಿವಿಗೆ ಬರುತ್ತದೆ. ಆದರೆ ಗಾಂಧಿಯವರನ್ನು ನೋಡಲು ಹೆಬ್ಬಾರರು ಅನುಮತಿ ನೀಡದಿದ್ದುದು, ಕಂಬಳಕ್ಕೆ ಸಾರಲು ಹೋಗಿದ್ದಿದ್ದುದು

ಸಂಕಟವನ್ನೇ ತಂದರೂ 'ಗಾಂಧಿಗಿಂತ ದೊಡ್ಡದೇನು ಆ ಕಂಬಳ!' ಎನ್ನುವ ಗುರಿಕಾರ ಮರಕಾಲನ ಮಾತೇ ಸರಿಯೆನಿಸುವುದು ಅವನೊಳಗಿನ ಬದಲಾವಣೆಯ ಬೆಳಕನ್ನು ಕಾಣಿಸುತ್ತದೆ. ಹೆಬ್ಬಾರರ ಮಾತನ್ನು ಮೀರಿ ಕೊರಗರೆಲ್ಲ ಗಾಂಧಿ ನೋಡಲು ಹೋಗುವುದು ಅವರೆಲ್ಲ ಹೆಬ್ಬಾರರನ್ನು ವಿರೋಧಿಸುವ ಕುರುಹಾಗಿದೆ.

ಆದರೆ, ಸನಾತನಿಯಾದ ಹೆಬ್ಬಾರರು ಈ ಯಾವುದೇ ಗಾಂಧಿ ವಿಚಾರಧಾರೆಗೆ ಮರುಳಾಗದೆ ಅದರಿಂದ ಪ್ರಭಾವಿತರಾಗದೆ ಹಾಗೆಯೇ ಉಳಿಯುವುದು ತುಳುನಾಡಿನೊಳಗೆ ಆಗುತ್ತಿದ್ದ ಬದಲಾವಣೆಯೊಳಗೂ ಜಾತಿ, ಧರ್ಮ, ಕಂದಾಚಾರಗಳ ಬೇರು ನಾಶವಾಗದಿರುವುದರ ಸಂಕೇತವಾಗಿ ಕಾಣಿಸುತ್ತದೆ.

ಶಿಖಂಡಿಯೆನಿಸಿದ್ದ ದಾರು ಮಾರಪ್ಪನ ಸತಿಯಾಗಿ, ವಿಧವೆಯಾಗಿದ್ದ ದ್ರೌಪದಿ ಅದ್ರಾಮನ ಹೆಂಡತಿಯಾಗಿ ಹೊಸ ಜೀವನವನ್ನು ಪಡೆದಿದ್ದರು. ಮೂರನೆಯ ಬಾರಿ ಗಾಂಧಿಯವರು ಮಂಗಳೂರಿಗೆ ಬಂದಾಗ ಇವರಿಬ್ಬರು ತಮ್ಮ ಒಡವೆಗಳನ್ನು, ಖಾದಿ ಸೀರೆಗಳನ್ನು ಸ್ವತಃ ಗಾಂಧಿಯವರಿಗೆ ಅರ್ಪಿಸಿ ಮಾರಪ್ಪ ಹಾಗೂ ಅದ್ರಾಮರ ಬದುಕನ್ನು ಸಾರ್ಥಕಗೊಳಿಸಿದ್ದರು. ತುಳುನಾಡಿನ ಹೆಣ್ಣುಮಕ್ಕಳು ಒಡವೆ ವಸ್ತ್ರಗಳಿಗೆ ಮೋಹಗೊಳ್ಳದೆ ದೇಶಸೇವೆಗಾಗಿ ತಮ್ಮ ಅಳಿಲು ಸೇವೆ ಮಾಡಿದ್ದು ಗಾಂಧಿಯವರು ಮಂಗಳೂರಿಗೆ ಅಷ್ಟು ಬಾರಿ ಭೇಟಿನೀಡಿದ್ದರ ಆಶಯ ಈಡೇರಿದಂತೆ ಆಗಿತ್ತು.

ಗಾಂಧಿಯವರು ದ್ರೌಪದಿ ಮತ್ತು ದಾರುವಿನ ಬಳಿ ಒಡವೆ ಪಡೆದರೂ ಅದ್ರಾಮನ ವಿಷಯ ತಿಳಿದು ದ್ರೌಪದಿಗೆ ಮರಳಿ ಒಡವೆ ತೊಡಿಸಿ, ಕುಂಕುಮವಿರಿಸಿ, ಹೂ ಕೊಡುವುದು ಅವರ ಹೃದಯವಂತಿಕೆಯ ಪ್ರತಿಬಿಂಬವಾಗಿದೆ. ಈ ಸುದ್ದಿಯನ್ನು ತಿಳಿದ ಮಾರಪ್ಪನ ತಾಯಿ ಸೂರಕ್ಕೆ ತನ್ನ ಮಗನನ್ನು ಹಾಳುಮಾಡಿದವ ಗಾಂಧಿ, ಎಲ್ಲರ ಒಡವೆಗಳನ್ನು ಕಸಿದುಕೊಳ್ಳುತ್ತಿದ್ದವ ಗಾಂಧಿ, ತಾಯಿಯಿಂದ ಮಗನನ್ನು ಕಿತ್ತುಕೊಂಡ ಗಾಂಧಿ ಎಂದು ದೂರಿದ್ದರು. ಈ ಘಟನೆ ತಿಳಿದು 'ಅಯ್ಯೋ.... ಪುಣ್ಯಾತ್ಮ! ನಿನ್ನನ್ನೊಂದು ಗಳಿಗೆ ನಾನು ಕಾಣದೆ ಹೋದೆನೇ' ಎಂದು ಪರಿತಪಿಸುವುದು ಅವರೊಳಗೂ ಗಾಂಧಿವಾದ ಹುಟ್ಟಿದ ಸೂಚನೆಯಾಗುತ್ತದೆ.

'ಗಾಂಧಿಬಂದ' ಕಾದಂಬರಿಯು ಸ್ವಾತಂತ್ರ್ಯ ಚಳುವಳಿಯ ಕಾಲದ ಕರಾವಳಿಯ ಅಥವಾ ತುಳುನಾಡಿನ ಜನ ಜೀವನವನ್ನು ಹಲವು ಆಯಾಮಗಳಲ್ಲಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. ಕಂಬಳ, ಭೂತಕೋಲ, ಕೋಳಿ ಅಂಕ, ಹಬ್ಬ-ಹರಿದಿನ, ಜಾತ್ರೆ, ದಿಬ್ಬಣಗಳಂತಹ ಆಚರಣೆಗಳಲ್ಲಿಯೇ ಮುಳುಗಿ ಹೋಗಿ ತಂತಮ್ಮ ಬದುಕನ್ನು ಕಟ್ಟಿಕೊಂಡಿದ್ದ ಆ ಸಮಾಜದೊಳಗೆ 'ಗಾಂಧಿ'ಯವರ ಪ್ರವೇಶವೇ ಒಂದು ದೊಡ್ಡ ತಿರುವಾಗಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಕೊರಗರ ಐತುವಿನಿಂದ ಬ್ರಾಹ್ಮಣ ಹೆಬ್ಬಾರರವರೆಗೂ ಗಾಂಧಿ ಯಾರೆಂಬುದೇ ಗೊತ್ತಿರುವುದಿಲ್ಲ. ಆದರೆ ಸ್ವರಾಜ್ಯ ಸಾಧನೆಗಾಗಿ ದೇಶವಿಡೀ ಸುತ್ತುತ್ತ ಜನಸಾಮಾನ್ಯರನ್ನು ದೇಶಭಕ್ತರನ್ನಾಗಿಸುತ್ತಿದ್ದ ಮೋಡಿಕಾರ ಗಾಂಧಿ. ಇವರ ಬಗೆಗಿನ ದಂತಕಥೆಗಳು ಅಲ್ಲಲ್ಲ

ಹರಿದಾಡುತ್ತಿದ್ದವು. ಕಾರ್ನಾಡ ಸದಾಶಿವರಾಯರು, ಗುತ್ತಿನ ಶೆಟ್ಟರು, ತಿಂಗಳಾಯರು, ಮಾರಪ್ಪ, ಅದ್ರಾಮನಂತಹ ದೇಶಭಕ್ತರಿಂದ ಗಾಂಧಿಯವರ ಅಸಹಕಾರ ಚಳವಳಿ, ವಿದೇಶಿವಸ್ತ್ರ ಬಹಿಷ್ಕಾರ, ಖಾದಿ ಉಡುಗೆ, ಮದ್ಯಪಾನ ನಿಷೇಧ ಮುಂತಾದ ಸಮಾಜ ಸುಧಾರಣೆಯ ವಿಷಯಗಳು ಅಲ್ಲಿ ಪ್ರಚಾರ ಪಡೆದಿದ್ದವು. ಅಂತೆಯೇ, ಜಾತಿಭೇದ ಇಲ್ಲ ಎನ್ನುವ, ಕೆಳಜಾತಿಯವರನ್ನು ಗುಡಿಯೊಳಗೆ ಪ್ರವೇಶಿಸಿ ಎನ್ನುವ, ವಿಧವಾ ವಿವಾಹವನ್ನು ಬೆಂಬಲಿಸುವ ಗಾಂಧಿಯವರ ಚಿಂತನೆಗಳಿಂದ ಮೇಲ್ಜಾತಿಯವರಲ್ಲಿ ಹೆಚ್ಚಾಗಿ ಹೆಬ್ಬಾರರಲ್ಲಿ ಗಾಂಧಿಯ ಬಗ್ಗೆ ಸಿಟ್ಟು, ಅಸಹನೆ, ತಿರಸ್ಕಾರಗಳು ಬೆಳೆದಿದ್ದವು.

ಒಂದಲ್ಲ ಒಂದು ರೀತಿಯಲ್ಲಿ ಗಾಂಧಿಯ ಹೆಸರನ್ನು ಪದೇ ಪದೇ ಕೇಳಿಸಿಕೊಳ್ಳುತ್ತಿದ್ದ, ಅವರಿಂದ ಪ್ರಭಾವಿತರಾಗಿದ್ದ, ಕೋಪಗೊಂಡಿದ್ದ ಎಲ್ಲರೂ ಒಮ್ಮೆ ಆ ಗಾಂಧಿಯವರನ್ನು ನೋಡಲು ಬಯಸಿದ್ದು ಗಾಂಧಿಯವರ ವ್ಯಕ್ತಿತ್ವದ ಮಹತ್ವವಾಗಿದೆ. ಈ ನಡುವೆಯೇ ಗಾಂಧಿಯವರು ಮಂಗಳೂರಿಗೆ ಮೂರು ಬಾರಿ ಭೇಟಿಕೊಟ್ಟರು. ಈ ಭೇಟಿಯ ನಡುವೆ ಹಲವು ವರ್ಷಗಳ ಅಂತರವಿದ್ದು, ಈ ಅವಧಿಯಲ್ಲಿ ಆ ಸಮಾಜದಲ್ಲಿ ಆಗುವ ಸ್ಥಿತ್ಯಂತರಗಳನ್ನು ಈ ಕಾದಂಬರಿಕಾರರು ಇಲ್ಲಿ ಚಿತ್ರಿಸಿದ್ದಾರೆ.

ತುಳುನಾಡಿನ ಹಬ್ಬ-ಹರಿದಿನಗಳು, ಆಚರಣೆಗಳು, ಭೂತಕೋಲ, ಕಂಬಳ, ಕೋಳಿ ಅಂಕಗಳಾದಿಯಾಗಿ ಸಾವು, ದಿಬ್ಬಣಗಳ ವಿವರಗಳನ್ನು ಎಳೆ ಎಳೆಯಾಗಿ ಇಲ್ಲಿ ಕಟ್ಟಿಕೊಡಲಾಗಿದೆ. ಹಾಗೆಯೇ ಕರಾವಳಿ ಭಾಗದಲ್ಲಿದ್ದ ಅಳಿಯಕಟ್ಟಿನ – ಮಾತೃಪ್ರಧಾನ ವ್ಯವಸ್ಥೆಯ ರೀತಿ ರಿವಾಜುಗಳನ್ನು ಅದರ ಪರಿಣಾಮಗಳನ್ನು ಚಿತ್ರಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ತುಳುನಾಡಿನ ಬದುಕನ್ನು ಹಲವು ಮಗ್ಗುಲುಗಳಿಂದ ಕಟ್ಟಿಕೊಡುವಲ್ಲಿ ಈ ಕೃತಿ ಯಶಸ್ವಿಯಾಗಿದೆ.

ಗಾಂಧಿಯ ಪ್ರಭಾವದಿಂದ ಯಾರೊಬ್ಬರು ತಪ್ಪಿಸಿಕೊಳ್ಳಲಾಗದಂತಹ, ಆ ಗಾಂಧಿವಾದದ ಅಲೆಯೆಂದಲೇ ಆಗಬಹುದಾದ ಸುಧಾರಣೆಗಳು, ದೇಶಪ್ರೇಮ, ಬಲಿದಾನಗಳೆಲ್ಲವೂ ಇಲ್ಲಿ ಮೇಳೈಸಿವೆ. ಒಂದು ಪ್ರದೇಶದ ಸಂಸ್ಕೃತಿ ಆಚರಣೆ, ಜನಜೀವನದೊಳಗೆ ಗಾಂಧಿಯ ಪ್ರವೇಶವಾಗಿ ಆಶಾದಾಯಕ ಬದುಕು ನಿರ್ಮಾಣವಾಗುವುದು ಈ ಕಾದಂಬರಿಯ ಸತ್ವವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ನಾಗವೇಣಿ ಎಚ್., (2000), ಗಾಂಧಿ ಬಂದ, ಬೆಂಗಳೂರು: ಅಭಿನವ ಪ್ರಕಾಶನ.
2. ರಾಮಚಂದ್ರನ್ ಸಿ.ಎನ್., (2006), ಕಾದಂಬರಿ ಮತ್ತು ಸಮಾಜ, ಬೆಂಗಳೂರು: ಅಂಕಿತ ಪುಸ್ತಕ.
3. ವಿವೇಕ ರೈ ಬಿ.ಎ., (1985), ತುಳು ಜಾನಪದ ಸಾಹಿತ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ರಹಮತ್ ತರೀಕೆರೆ, (2001), ಕರ್ನಾಟಕದಲ್ಲಿ ಗಾಂಧಿ, ಹೆಗ್ಗೋಡು: ಅಕ್ಷರ ಪ್ರಕಾಶನ.
5. ಗಿರಡ್ಡಿ ಗೋವಿಂದರಾಜ, (2004), ಹೊಸಗನ್ನಡ ಕಾದಂಬರಿಗಳ ಆಶಯ, ಧಾರವಾಡ: ಸಮಾಜ ಪುಸ್ತಕಾಲಯ.